ಉಡುಪಿ ಪವರ್ ಕಾರ್ಪೋರೇಷನ್‌ಗೆ ಜಮೀನು ಖರೀದಿ ಬಗ್ಗೆ

166 (505) ಶ್ರೀ ಲಾಲಾಜಿ ಆರ್. ಮೆಂಡನ್ (ಕಾಪು) : ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಉಡುಪಿ ಪವರ್ ಕಾರ್ಪೊರೇಷನ್ ಸಂಸ್ಥೆಯು ಸರ್ಕಾರಿ ಹಾಗೂ ಖಾಸಗಿ ಜಮೀನುಗಳನ್ನು ಎಷ್ಟು ವಶಪಡಿಸಿಕೊಳ್ಳಲಾಗಿದೆ;

ಆ) ಖಾಸಗಿ ಜಮೀನಿನವರಿಗೆ ಯಾವ ಮಾನದಂಡದಲ್ಲಿ ಪರಿಹಾರ ನೀಡಲಾಗಿದೆ;

ಇ) ಈ ಘಟಕದಲ್ಲಿ ಒಟ್ಟು ಎಷ್ಟು ಜನರಿಗೆ ಉದ್ಯೋಗ ನೀಡಲಾಗಿದೆ;

ಈ) ಈ ಘಟಕದಲ್ಲಿ ಸ್ಥಳೀಯರಿಗೆ ಎಷ್ಟು ಜನರಿಗೆ ಉದ್ಯೋಗಾವಕಾಶ ನೀಡಲಾಗಿದೆ;

ಉ) ಈ ಘಟಕವನ್ನು ಯಾವಾಗ ಸಾರ್ವಜನಿಕವಾಗಿ ಪ್ರಾರಂಭಿಸ ಲಾಗುವುದು?

ಶ್ರೀ ಮುರುಗೇಶ್ ಆರ್. ನಿರಾಣಿ (ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು) :

ಅ) ಉಡುಪಿ ಪವರ್ ಕಾರ್ಪೊರೇಷನ್ ಸಂಸ್ಥೆಗೆ ಎಲ್ಲೂರು, ತೆಂಕ, ಪಾದಬೆಟ್ಟು ಮತ್ತು ಸಾಂತೂರು ಗ್ರಾಮಗಳಲ್ಲಿ 757 ಎಕರೆ 10 ಸೆಂಟ್ಸ್ ಖಾಸಗಿ ಮತ್ತು 68 ಎಕರೆ 65 ಸೆಂಟ್ಸ್ ಸರಕಾರಿ, ಹೀಗೆ ಒಟ್ಟು 825 ಎಕರೆ 75 ಸೆಂಟ್ಸ್ ಜಮೀನನ್ನು ಸ್ವಾಧೀನಪಡಿಸಿದ್ದು, ಕಂಪನಿಯವರು ನಂತರ ಯೋಜನೆಗೆ ಅವಶ್ಯಕತೆ ತಕ್ಕಂತೆ ಕೋರಿಕೆ ಸಲ್ಲಿಸಿರುವಂತೆ 650-24 ಎಕರೆ ಜಮೀನನ್ನು ಕಂಪನಿಗೆ ಹಸ್ತಾಂತರಿಸಲಾಗಿದೆ.

ಆ) ಕೆ.ಐ.ಎ.ಡಿ. ಕಾಯ್ದೆ 1966 ರ ಕಲಂ 29(2) ರಡಿ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಭೂ ಮಾಲೀಕರೊಂದಿಗೆ ಭೂ ದರ ಸಲಹಾ ಸಮಿತಿ ಸಭೆಯನ್ನು ಕರೆದು, ಒಪ್ಪಂದದ ಅಡಿಯಲ್ಲಿ ಎಕರೆಯೊಂದಕ್ಕೆ ಭೂ ದರಗಳನ್ನು ನಿಗದಿಪಡಿಸಲಾಗಿದೆ. ನಿರ್ಧರಿಸಲಾದ ಭೂ ದರಗಳನ್ನು ಕೆಐಎಡಿ ಮಂಡಳಿ ಸಭೆಯಲ್ಲಿ ಅನುಮೋದಿಸಲಾಗಿದೆ. ಸದರಿ ಭೂ ದರ ಸಲಹಾ ಸಮಿತಿಯು ಚಾಲ್ತಿಯಲ್ಲಿರುವ ಮಾರುಕಟ್ಟೆ ದರ ಹಾಗೂ ಮಾರ್ಗಸೂಚಿ

ಬೆಲೆಯ ಆಧಾರದ ಮೇಲೆ ಸ್ವಾಧೀನಪಡಿಸಿದ ಜಮೀನುಗಳಿಗೆ ಎಕರೆಯೊಂದಕ್ಕೆ ದರ ನಿಗದಿಪಡಿಸಲಾಗಿದೆ.

ಸದರಿ ಒಪ್ಪಂದದ ದರದಲ್ಲಿ ಪರಿಹಾರ ಪಡೆಯದೇ ಇರುವ ಭೂ ಮಾಲೀಕರಿಗೆ ಭೂಸ್ವಾಧೀನ ಕಾಯ್ದೆಯನ್ವಯ ಐತೀರ್ಪು ರಚಿಸಿ, ಪರಿಹಾರವನ್ನು ಪಾವತಿಸಲಾಗುವುದು.

ಇ) ಈ ಘಟಕ ನಿರ್ಮಾಣ ಹಂತದಲ್ಲಿದೆ. ಸಧ್ಯಕೆ ಈ ಹಂತದಲ್ಲಿ ಸುಮಾರು 6000 ಜನರಿಗೆ ಉದ್ಯೋಗ ನೀಡಲಾಗಿದೆ.

ಈ) ನಿರ್ಮಾಣ ಹಂತದಲ್ಲಿ ಸುಮಾರು 55% ರಷ್ಟು ಸ್ಥಳೀಯರಿಗೆ ಉದ್ಯೋಗ ನೀಡಲಾಗಿದೆ.

ಉ) ಯೋಜನೆಯು ಅಂತಿಮ ಹಂತದಲ್ಲಿದ್ದು, 400 ಕೆ.ವಿ. ವಿದ್ಯುತ್ ಸಾಮರ್ಥ್ಯದ ಕಾರ್ಯವು ಬಾಕಿಯಿದ್ದು, ಇದು ಪೂರ್ಣಗೊಂಡ ಕೂಡಲೇ ಅಂದಾಜು ಏಪ್ರಿಲ್ 2010ರ ಒಳಗಾಗಿ ಯೋಜನೆಯು ಕಾರ್ಯಾರಂಭ ಗೊಳ್ಳುವ ಸಾಧ್ಯತೆ ಇರುತ್ತದೆ.

ಉಡುಪಿ ದೇವಸ್ಥಾನಗಳ ಆದಾಯ

167 (506) ಶ್ರೀ ಲಾಲಾಜಿ ಆರ್. ಮೆಂಡನ್ (ಕಾಪು) : ಮಾನ್ಯ ಗೃಹ ಹಾಗೂ ಮುಜರಾಯಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಉಡುಪಿ ಜಿಲ್ಲೆಯ ಕಾಪು ವಿಧಾನಸಭಾ ಕ್ಷೇತ್ರದಲ್ಲಿ ಬರುವ ಧಾರ್ಮಿಕ ದತ್ತಿ ಇಲಾಖೆಗೆ ಸೇರಿರುವ ಒಟ್ಟು ಎಷ್ಟು ದೇವಸ್ಥಾನಗಳಿವೆ;

ಆ) ಆ ದೇವಸ್ಥಾನಗಳಿಂದ ಬರುವ ಆದಾಯವೆಷ್ಟು;

ಇ) ಆ ದೇವಸ್ಥಾನಗಳಿಂದ ಬಂದ ಆದಾಯವನ್ನು ಸಾರ್ವಜನಿಕ ಕ್ಷೇತ್ರ ಮೂಲಭೂತ ಸೌಲಭ್ಯಗಳಿಗೆ ಬಳಕೆ ಮಾಡಿಕೊಳ್ಳಬಹುದೆ?

ಡಾ॥ ವಿ.ಎಸ್.ಆಚಾರ್ಯ (ಗೃಹ ಹಾಗೂ ಮುಜರಾಯಿ ಸಚಿವರು) :

ಅ) ಒಟ್ಟು 79.

ಆ) ವಾರ್ಷಿಕ ರೂ. 2,49,04,724-00 (ಅಂದಾಜು)

ಇ) ಸಾರ್ವಜನಿಕ ಕ್ಷೇತ್ರದ ಮೂಲಭೂತ ಸೌಲಭ್ಯಗಳಿಗೆ ದೇವಾಲಯಗಳ ಆದಾಯವನ್ನು ಬಳಕೆ ಮಾಡಿಕೊಳ್ಳಲು ಅವಕಾಶವಿರುವುದಿಲ್ಲ.